ಮುಲ್ಕಿ–ಮೂಡಬಿದ್ರಿ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಬಗ್ಗೆ

೧೩೮೨. ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಮುಲ್ಕಿ–ಮೂಡಬಿದ್ರಿ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಯೋಜನೆಯೇನಾದರೂ ಸರ್ಕಾರದಲ್ಲಿದೆಯೆ ;

ಆ) ಹಾಗಿದ್ದಲ್ಲಿ ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಿದರೆ ಇದರ ಅಭಿವೃದ್ಧಿಗೆ ವೆಚ್ಚ ಮಾಡುವ ಅಂದಾಜು ವೆಚ್ಚವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಮುಲ್ಕಿ–ಮೂಡಬಿದ್ರೆ ರಸ್ತೆಯು ಬೆಳ್ತಂಗಡಿ–ಮೂಡಬಿದ್ರೆ–ಮುಲ್ಕಿ ರಸ್ತೆಯ ಭಾಗವಾಗಿದ್ದು ಈಗಾಗಲೇ ರಾಜ್ಯ ಹೆದ್ದಾರಿಯಾಗಿದೆ.

ಆ) ಈ ರಸ್ತೆಯು ಏಕ ಪಥ ರಸ್ತೆಯಾಗಿದ್ದು ಪೂರ್ಣವಾಗಿ ಡಾಂಬರೀಕರಿಸಿದೆ. ಈ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಸುಮಾರು ೧೨೧ ಲಕ್ಷ ರೂ. ಗಳ ಅಂದಾಜು ಬರುತ್ತದೆ. ೧೯೯೬–೯೧ನೇ ಸಾಲಿನಲ್ಲಿ ೨೦ ಲಕ್ಷ ರೂ. ಗಳ ಅಂದಾಜಿನಲ್ಲಿ ಈ ರಸ್ತೆಯ ಆಯ್ದ ಭಾಗಗಳ ಅಭಿವೃದ್ಧಿಯನ್ನು ತೆಗೆದುಕೊಳ್ಳಲು ಪ್ರಸ್ತಾಪಿಸಿದೆ.

ರಾಣೆಬೆನ್ನೂರಿನಲ್ಲಿ ಬಸ್ ನಿಲ್ದಾಣ ಸ್ಥಾಪನೆ

೧೦೮೦. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು)—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಣೆಬೆನ್ನೂರಿನಲ್ಲಿ ಬಸ್ ನಿಲ್ದಾಣ ಮತ್ತು ಡಿಪೋ ಸ್ಥಾಪಿಸಲು ಎ. ಪಿ. ಎಂ. ಸಿ. ಯ ತರಕಾರಿ ಮಾರುಕಟ್ಟೆಯಲ್ಲಿಯು ಳ ಎಕರೆ ನಿವೇಶನವನ್ನು ಖರೀದಿ ಮಾಡುವ ಪ್ರಸ್ತಾವನೆ ಇದೆಯೇ ;

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈ ವಿಷಯದಲ್ಲಿ ನಿರ್ದೇಶಕರು (ಮಾರ್ಕೆಟಿಂಗ್) ಇವರಿಗೆ ಮನವಿ ಮಾಡಿದೆಯೇ ;

ಇ) ನಿರ್ದೇಶಕರು (ಮಾರ್ಕೆಟಿಂಗ್) ರವರು ಈ ಮೇಲೆ ಹೇಳಿದ ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಮಾರಲು ಅನುಮತಿ ನೀಡಿದ್ದಾರೆಯೇ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ರಸ್ತೆಗಳಿಗೆ ಹಾಗೂ ಸೇತುವೆಗಳಿಗೆ ಗೊತ್ತುಪಡಿಸಿದ ಮೊತ್ತ

೧೪೯೯. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕ್ಕಲ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ರಾಜ್ಯದಲ್ಲಿ ಭಾರಿ ವಾಹನ ಸಂಚಾರವಿರುವ ಸಿಮೆಂಟ್ ಕಾರ್ಖಾನೆ ಪ್ರದೇಶಗಳಲ್ಲಿಯ ರಸ್ತೆ ಮತ್ತು ಸೇತುವೆಗಳಿಗಾಗಿ ೧೯೯೦–೯೧ನೇ ಸಾಲಿನಲ್ಲಿ ನೀಡಲಾದ ಅನುದಾನವೆಷ್ಟು ? (ರಸ್ತೆವಾರು ಮಾಹಿತಿ ಒದಗಿಸುವುದು)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

೧೯೯೦–೯೧ನೇ ಸಾಲಿನಲ್ಲಿ ಭಾರಿ ವಾಹನದ ಸಂಚಾರವಿರುವ ಸಿಮೆಂಟ್ ಕಾರ್ಖಾನೆ ಪ್ರದೇಶದಲ್ಲಿಯ ರಸ್ತೆ ಮತ್ತು ಸೇತುವೆಗಳಿಗಾಗಿ ಪ್ರತ್ಯೇಕವಾಗಿ ಅನುದಾನವನ್ನು ನೀಡಿರುವುದಿಲ್ಲ. ಆದರೆ ಲಭ್ಯವಿರುವ ಯೋಜನೇತರ ಅನುದಾನದಲ್ಲಿ, ನಿರ್ವಹಣೆ ಮಾಡಲಾಗುತ್ತಿದೆ. ಉತ್ತರ ವಲಯದಲ್ಲಿ